# ಶ್ರೀಮಾತೆ : ಆದರ್ಶ ಗೃಹಿಣಿ ಹಾಗೂ ಶ್ರೇಷ್ಠ ಸಾಧಕಿ

**ಸ್ವಾಮಿ ರಾಘವೇಶಾನಂದ**

ಸಂಸಾರದಲ್ಲಿ ಹೇಗೆ ಬದುಕಬೇಕು ಎಂಬುದನ್ನು ಕುರಿತು, (ವಿಶೇಷವಾಗಿ ಸ್ತ್ರೀಯರಿಗೆ) ಶ್ರೀಮಾತೆ ಶಾರದಾದೇವಿಯವರಷ್ಟು ಅತ್ಯುತ್ತಮವಾಗಿ ತಿಳಿಸಿಕೊಟ್ಟವರು ಬೇರೊಬ್ಬರಿಲ್ಲ. ಅವರ ಜೀವನವೇ ಎಲ್ಲಕ್ಕಿಂತ ಶ್ರೇಷ್ಠ ಉದಾಹರಣೆಯಾಗಿದೆ. ಈ ಕುರಿತು ವಿವರಿಸಿರುವ ಪೂಜ್ಯ ಸ್ವಾಮೀಜಿಯವರು ಉದಕಮಂಡಲ ರಾಮಕೃಷ್ಣ ಮಠದ ಮುಖ್ಯಸ್ಥರು. ಉತ್ತಮ ವಾಗ್ಮಿಗಳು ಮತ್ತು ಸಂಘಟಕರಾಗಿರುವ ಸ್ವಾಮೀಜಿಯವರು ಹಲವಾರು ಪುಸ್ತಕಗಳನ್ನು ಬರೆದಿದ್ದಾರೆ.

**ಒ**ಮ್ಮೆ ಶ್ರೀಮಾತೆ ಹೇಳಿದರು, ''ಶ್ರೀರಾಮಕೃಷ್ಣರು ಒಮ್ಮೆ ನನ್ನನ್ನು ಆದರ್ಶ ಸ್ತ್ರೀಯಾಗಿ ಬಾಳಲು ತಿಳಿಸಿದರು. ನಾನು ನನ್ನ ಜೀವನವನ್ನು ಆದರ್ಶವನ್ನಾಗಿ ಮಾಡುವುದಕ್ಕೆ ಎಷ್ಟು ಬೇಕೋ ಅದಕ್ಕಿಂತ ಹೆಚ್ಚಾಗಿಯೇ ಮಾಡಿದ್ದೇನೆ'' ಎಂದು.

ಸ್ವಾಮಿ ಪುರುಷೋತ್ತಮಾನಂದರು ತಮ್ಮ 'ಶ್ರೀ ಶಾರದಾದೇವಿ ಜೀವನ ಗಂಗಾ' ಎಂಬ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ: ''ಶ್ರೀಮಾತೆಯವರ ಜೀವನವನ್ನು ಅಧ್ಯಯನ ಮಾಡುವುದೆಂದರೆ ಮಹಾ ಆದರ್ಶವೊಂದು ಹೂವಿನಂತೆ ಅರಳಿ ವಿಕಸನಗೊಳ್ಳುವ ವಿನ್ಯಾಸವನ್ನು ಅಧ್ಯಯನ ಮಾಡಿದಂತೆ.'' ಇದೊಂದು ಮಾತು ಸಾಕು. ಅವರ ಜೀವನದ ಬಾಲ್ಯದ ಘಟನೆಗಳಿಂದ ಹಿಡಿದು ಅವರ ದೇಹಾಂತದವರೆಗೆ ಯಾವ ಘಟನೆಯನ್ನು ಪರಿಶೀಲಿಸಿದರೂ ಅಲ್ಲಿ ಆದರ್ಶದ ಔನ್ನತ್ಯವನ್ನು ಕಾಣಬಹುದು. ಆದರ್ಶ ಎಂದರೆ ಏನು? ಅದರಲ್ಲೂ ವೇದಾಂತದ ಆದರ್ಶ ಎಂದರೆ ಏನು? ಸ್ವಾಮೀಜಿ ಒಂದೆಡೆ ಹೇಳುತ್ತಾರೆ: ''ಧಾರ್ಮಿಕತೆ ಎಂದರೆ ಏನೆಂಬುದು ನನಗೆ ಗೊತ್ತಿಲ್ಲ. ಆದರೆ ನನ್ನ ಸಾಧನೆಯ ಫಲವಾಗಿ ನನ್ನಲ್ಲಿ ಒಂದು ದೊಡ್ಡ ಪರಿವರ್ತನೆ ಕಂಡು ಬಂದಿದೆ. ಇತರರ ನೋವು ಕಷ್ಟಗಳಿಗೆ ತೀವ್ರವಾಗಿ ಸ್ಪಂದಿಸುವ ಮನಸ್ಸು ಹಾಗೂ ಎಲ್ಲರ ಮಂಗಳಕ್ಕಾಗಿ ಹಾರೈಸುವ ಹೃದಯ ನನ್ನಲ್ಲಿ ಜಾಗೃತವಾಗಿದೆ.''

ಈ ವೇದಾಂತ ದರ್ಶನದ ಶ್ರೇಷ್ಠ ಉದಾಹರಣೆ ಶ್ರೀಮಾತೆ ಶಾರದಾದೇವಿಯವರ ಜೀವನ ದರ್ಶನ. ಶ್ರೀಶಾರದಾದೇವಿಯವರಿಗೆ ಆಧ್ಯಾತ್ಮಿಕ ಶಿಕ್ಷಣದ ಶ್ರೇಷ್ಠ ಗುರುಗಳು ಬಾಲ್ಯದಿಂದಲೇ ದೊರಕಿದ್ದರು. ಅವರು ಬೇರಾರೂ ಅಲ್ಲದೆ ತಮ್ಮ ಪತಿ ಶ್ರೀರಾಮಕೃಷ್ಣರೇ ಆಗಿದ್ದರು. ಅವರ ಸಾಧನೆ ತಮ್ಮ ಪತಿಯಂತೆ ದಕ್ಷಿಣೇಶ್ವರದ ಪಂಚವಟಿಯಲ್ಲಿ ಏಕಾಂಗಿಯಾಗಿ ಅಲ್ಲ. ಅವರದು ದಿನ ನಿತ್ಯದ ಕೆಲಸಗಳ ನಡುವೆ, ಜೀವ ಸೇವೆಯಲ್ಲಿ. ಸಂಸಾರದ ಎಲ್ಲ ಕೋಲಾಹಲಗಳ ನಡುವೆ. ಅವೆಲ್ಲ ಸಾಧಾರಣ ಕೆಲಸದಂತೆ ಕಾಣುತ್ತದಲ್ಲ ಅದನ್ನು ಆಧ್ಯಾತ್ಮಿಕ ಸಾಧನೆ ಎಂದು ಹೇಗೆ ಹೇಳುವುದು? ಎಂದರೆ ದೃಷ್ಟಿಕೋನವನ್ನು ಬದಲಾಯಿಸಿಕೊಂಡರೆ ಆ ಸಣ್ಣ ಸಣ್ಣ ಕೆಲಸಗಳೇ ದೊಡ್ಡ ಆಧ್ಯಾತ್ಮಿಕ ಸಾಧನೆಯಾಗಿ ಕಾಣುವುದು.



ಶ್ರೀಶಾರದಾಮಾತೆಗೆ ಬಾಲ್ಯದಿಂದಲೇ ಲೌಕಿಕ ಕೆಲಸಗಳು ಆಧ್ಯಾತ್ಮಿಕ ಸಾಧನೆಗೆ ಸೋಪಾನವಾಗುವಂಥ ಶಿಕ್ಷಣ ಶ್ರೀರಾಮಕೃಷ್ಣರಿಂದ ದೊರೆಯಿತು. ಅದರ ಜೊತೆ ಜೊತೆಗೇ ಅವರಿಗೆ ಈ ಜಗತ್ತಿನ ಅನಿತ್ಯತೆ ಹಾಗೂ ತ್ಯಾಗಜೀವನದ ಆದರ್ಶವನ್ನು ಅವರು ಮನದಟ್ಟು ಮಾಡಿಕೊಡುತ್ತಿದ್ದರು.

ಮನೆಯ ಹಿರಿಯರ ಹಾಗೂ ಅತಿಥಿಗಳ ಸೇವೆಯನ್ನು ಅನಾಸಕ್ತಿಯಿಂದ ಮಾಡುವ ವಿಧಾನ, ಅತಿ ಕಠಿಣವಾದ ಕೆಲಸವನ್ನು ಶ್ರದ್ಧೆಯಿಂದ ಮಾಡುವುದು, ಕಿರಿಯರೊಡನೆ ಸೌಹಾರ್ದತೆ, ಸಮವಯಸ್ಕರೊಂದಿಗೆ ಸತ್‌ಚಿಂತನೆ, ನಡೆನುಡಿಗಳಲ್ಲಿ ಸಂಯಮ, ಪ್ರಯಾಣದ ಸಮಯದಲ್ಲಿ ತೆಗೆದುಕೊಂಡ ಸಾಮಾನುಗಳ ಬಗ್ಗೆ ನಿಗಾ ವಹಿಸುವುದು, ಎಣ್ಣೆ ಖರ್ಚಾಗದಂತೆ ದೀಪದಲ್ಲಿ ಬತ್ತಿಯನ್ನು ಹೊಸೆದಿಡುವ ವಿಧಾನ — ಏನೊಂದೂ ಈ ಅಪೂರ್ವ ಶಿಕ್ಷಣದಲ್ಲಿ ಹೊರತಾಗಿರಲಿಲ್ಲ.

ಕಲ್ಕತ್ತೆಯಿಂದ ಹಠಾತ್ತಾನೆ ಕೆಲವರು ಶ್ರೀಮಾತೆಯವರನ್ನು ಕಾಣಲೆಂದು ಜಯರಾಂಬಾಟಿಗೆ ಹೋದರು. ಅದೊಂದು ಕುಗ್ರಾಮ. ಇದ್ದಕ್ಕಿದ್ದಂತೆ ಬಂದ ಅತಿಥಿಗಳ ಸೇವೆಗಾಗಿ ಹಾಲನ್ನು ತರಲು ಶ್ರೀಮಾತೆ ಅವರಿವರ ಮನೆಗೆ ಓಡಿ ಒಂದು ಪಾವು, ಅರ್ಧ ಪಾವಿನಂತೆ ಹಾಲನ್ನು ಸಂಗ್ರಹಿಸತೊಡಗಿದರು. ಇದು ನೋಡಲು ಸಾಧಾರಣ ದೃಶ್ಯದಂತೆ ತೋರಬಹುದು; ಹತ್ತಿರ ಹೋದವರು ಅವರಿಂದ ಬೀಳ್ಕೊಳ್ಳುವಾಗ ಹೊಸ ಭಾವನೆಗಳನ್ನು ಹೊತ್ತು ಅಲ್ಲಿಂದ ಹೊರಬೀಳುತ್ತಾರೆ. ಇದುವರೆಗೆ ಕಂಡು ಪರಿಚಯವೇ ಇಲ್ಲದ ಜನರು ನಿಮಿಷದಲ್ಲಿ ಅವರ ಸ್ವಂತದವರಾಗಿ ಬಿಡುತ್ತಾರೆ. ಶ್ರೀಮಾತೆ ಅಲ್ಲಿ ಗೃಹಿಣಿಯ ಆದರ್ಶವನ್ನು ತೋರುವುದು ಮಾತ್ರವಲ್ಲದೆ, ತಮ್ಮ ಅಹಂಕಾರವನ್ನು ತ್ಯಜಿಸಿ ಮನೆ ಮನೆಗೆ ಹೋಗಿ ತಮ್ಮ ಸಾಧನೆಯ ಶ್ರೇಷ್ಠತ್ವವನ್ನು ಹೊರಸೂಸುತ್ತಾರೆ.

ಅಪರಿಚಿತರಾಗಿ ಬಂದವರು ಜಯರಾಂಬಾಟಿಯಿಂದ ಹಿಂದಿರುಗುವಾಗ ನೋಡುತ್ತಾರೆ ಮಾತೆಯ ಕರುಣಾರ್ದ್ರ ಮೂರ್ತಿಯನ್ನು — ಕುಂಟುತ್ತಾ ಅವರು ತಮ್ಮ ಹಿಂದೆ ಬರುತ್ತಿದ್ದಾರೆ. ಕಣ್ಣಲ್ಲಿ ನೀರು, ಕುಳಿತ ಎತ್ತಿನಗಾಡಿ ರಸ್ತೆಯ ತಿರುವಿನಲ್ಲಿ ಮರೆಯಾಗುವವರೆಗೂ ಅದೇ ದೃಶ್ಯ — ಅದೇ ಮಾತೃಮೂರ್ತಿ, ಕೈ ಜೋಡಿಸಿ ತಮ್ಮಗಳಿಗಾಗಿ ಪ್ರಾರ್ಥಿಸುತ್ತಾ ರಸ್ತೆಯ ಧೂಳಿನಲ್ಲಿ ಒಂದಾಗಿ ನಿಂತಿರುವುದನ್ನು ಅವರು ನೋಡುತ್ತಾರೆ. ಇದು ಶ್ರೀಮಾತೆಯ ವಿಶಿಷ್ಟ ವ್ಯಕ್ತಿತ್ವ. ಒಂದೆಡೆ ಅವರ ಆಧ್ಯಾತ್ಮಿಕ ಸಾಧನೆಯಾದರೆ ಮತ್ತೊಂದೆಡೆ ಆದರ್ಶ ಗೃಹಿಣಿಯ ಅಭಿವ್ಯಕ್ತಿ.

ಶ್ರೀಮಾತೆಯ ಸಂನ್ಯಾಸಿ ಶಿಷ್ಯರೊಬ್ಬರು ಅವರ ಈ ಅದ್ಭುತ ವ್ಯಕ್ತಿತ್ವವನ್ನು ಹೀಗೆ ವಿವರಿಸುತ್ತಾರೆ: ''ಅವರು ಸಂಸಾರದ ಈ ಕೋಲಾಹಲಗಳ ನಡುವೆ ಒಂದಾಗಿದ್ದರೂ ಅವರ ಮನಸ್ಸು ಸದಾ ಪ್ರಶಾಂತವಾಗಿರುತ್ತಿತ್ತು (ನಿಜವಾದ ಸ್ಥಿತಪ್ರಜ್ಞನ ಸ್ಥಿತಿ). ಅವರು ಈ ಎಲ್ಲದರ ಮಧ್ಯದಲ್ಲಿ ಬಹು ಮೇಲೆ ಇದ್ದಾರೆ ಎನಿಸುತ್ತಿತ್ತು. ಜಗತ್ತು ಬಹು ಕೆಳಗೆ ಬಿದ್ದುಕೊಂಡಿದೆ. ಎಲ್ಲದರ ನಡುವೆ ಓಡಾಡಿಕೊಂಡಿದ್ದಾರೆ. ಆದರೂ ಯಾವುದರಿಂದಲೂ ಲಿಪ್ತವಾಗಿಲ್ಲ. ಈ ಅವಸ್ಥೆಯಲ್ಲಿ ಶ್ರೀಮಾತೆ ತಮ್ಮೆಲ್ಲ ಮಕ್ಕಳ ಕಲ್ಯಾಣಕ್ಕಾಗಿ, ಈ ಎಲ್ಲ ಕರ್ಮಪಾಶಗಳಿಂದ ಅವರೆಲ್ಲರೂ ಮುಕ್ತರಾಗಿ ಭಗವತ್ ಪಥದಲ್ಲಿ ಅಗ್ರಗಾಮಿಗಳಾಗಲು ಅವರನ್ನು ಪ್ರೇರೇಪಿಸುತ್ತಾರೆ.''

ತಮ್ಮ ತೀವ್ರ ಸಾಧನೆಯ ಬಗ್ಗೆ, ತಮಗೇ ಅರಿಯದಂತೆ ಕೆಲ ಕೆಲವು ಘಟನೆಗಳನ್ನು ಅವರು ಪ್ರಸ್ತಾಪಿಸಿದ್ದಾರೆ. ತಾವು ಬೃಂದಾವನಕ್ಕೆ ಹೋಗಿದ್ದ ವಿಚಾರ ಬಂದಾಗ ಹೇಳಿದರು: ''ಯೋಗಿನ್ ಮಾ ಹಾಗೂ ನಾನು ಎಷ್ಟು ಆನಂದವಾಗಿ ಅಲ್ಲಿ ಜಪಧ್ಯಾನದಲ್ಲಿ ಕಳೆದಿದ್ದೆವು. ಮುಖದ ಮೇಲೆ ನೊಣಗಳು ಕುಳಿತು, ಕಚ್ಚಿ ಗಾಯ ಮಾಡಿಬಿಡುತ್ತಿದ್ದವು. ಆದರೂ ನನಗೆ ಗೊತ್ತಾಗುತ್ತಿರಲಿಲ್ಲ.'' ಮತ್ತೊಮ್ಮೆ ಸುಧೀರಾ ಎಂಬ ಭಕ್ತೆಗೆ ಹೇಳಿದರು, ''ನನಗೊಮ್ಮೆ ಎಂಥ ಅವಸ್ಥೆ ಬಂದಿತ್ತೆಂದರೆ ದೇವರ ನೈವೇದ್ಯದಲ್ಲಿರುವ ಇರುವೆಯನ್ನು ತೆಗೆಯಲೂ ಸಾಧ್ಯವಾಗುತ್ತಿರಲಿಲ್ಲ. ಶ್ರೀರಾಮಕೃಷ್ಣರೇ ಆ ರೂಪದಲ್ಲಿ ಆಹಾರವನ್ನು ಸೇವಿಸುತ್ತಿದ್ದಾರೆ ಎನಿಸುತ್ತಿತ್ತು.'' ಅವರ ಮನಸ್ಸು ಈ ಜಗತ್ತಿನಲ್ಲಿ ವ್ಯವಹರಿಸುತ್ತಿದ್ದರೂ ಅವರು ಎಂತಹ ಅವಸ್ಥೆಯಲ್ಲಿರುತ್ತಿದ್ದರೆಂದರೆ ಒಮ್ಮೆ ಹೇಳುತ್ತಾರೆ: ''ನನಗೆ ಅಶಾಂತಿಯೆಂಬುದೇ ತಿಳಿಯದು. ದೇವರ ಸಾನ್ನಿಧ್ಯ ನನ್ನಪಾಲಿಗೆ ಕರತಲಾಮಲಕದಂತೆ. ನನಗಿಷ್ಟ ಬಂದಲ್ಲಿ ಭಗವಂತನನ್ನು ನೋಡಬಲ್ಲೆ.''

ಶ್ರೀಮಾತೆಯವರು ರಾಧುವೆಂಬ ಮಾಯೆಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಮುಂಚೆ ಯಾವ ಆಧ್ಯಾತ್ಮಿಕ ಸ್ಥಿತಿಯಲ್ಲಿ ವಾಸಿಸುತ್ತಿದ್ದರೆಂಬುದನ್ನು ಸ್ವಾಮಿ ಶಾರದಾನಂದರು ಹೀಗೆ ವಿವರಿಸುತ್ತಾರೆ: ''ಅವರು ಧ್ಯಾನದಲ್ಲಿ ಸಂಪೂರ್ಣವಾಗಿ ಮುಳುಗಿರುತ್ತಿದ್ದರು, ಗೋಲಾಪ್ ಮಾ ಹಾಗೂ ಯೋಗಿನ್ ಮಾ ಅವರನ್ನು ಪ್ರತಿಮೆಯಂತೆ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಎತ್ತಿ ಕೂರಿಸುತ್ತಿದ್ದರು. ಅವರಿಗೆ ಸ್ವಲ್ಪವೂ ದೇಹದ ಪ್ರಜ್ಞೆಯೇ ಇರುತ್ತಿರಲಿಲ್ಲ. ಅವರು ನಮಗೆ ಜೀವಂತ ದೇವಿಯಂತೆ ಕಾಣಿಸುತ್ತಿದ್ದರು. ಅವರು ಪೂಜೆಗೆ ಕುಳಿತಿರುವಾಗಲಂತೂ ಅವರ ಹತ್ತಿರ ಸುಳಿಯಲೂ ಆಗುತ್ತಿರಲಿಲ್ಲ. ಅಷ್ಟು ಭಯವಾಗುತ್ತಿತ್ತು.''

ಒಬ್ಬ ವ್ಯಕ್ತಿಯನ್ನು ನಾವು ಆದರ್ಶ ಗೃಹಿಣಿ ಎಂದು ಕರೆಯಬೇಕಾದರೆ ಅವಳಲ್ಲಿ ಹಲವಾರು ಗುಣಗಳು ವಿಶೇಷವಾಗಿ ಎದ್ದು ಕಾಣುತ್ತಿರಬೇಕು. ೧) ಎಲ್ಲರೊಡನೆ ಸಮವಾಗಿ ಬಾಳಬೇಕು ೨) ಸಾಮಾಜಿಕ ಪ್ರಜ್ಞೆ ಹಾಗೂ ಕಳಕಳಿ ತೀವ್ರವಾಗಿರಬೇಕು ೩) ಪತ್ನೀಧರ್ಮ ೪) ಮಾತೆಯ ಧರ್ಮ ೫) ಸ್ತ್ರೀ ಧರ್ಮ. ಈ ಐದು ಗುಣಗಳು ಯಾವ ಸ್ತ್ರೀಯಲ್ಲಿ ವ್ಯಕ್ತವಾಗುತ್ತದೋ ಅವಳು ಮಾತ್ರ ಆದರ್ಶ ಗೃಹಿಣಿಯಾಗಲು ಸಾಧ್ಯ. ಶ್ರೀಮಾತೆಯಲ್ಲಿ ಈ ಎಲ್ಲ ಗುಣಗಳೂ ಸಂಪೂರ್ಣವಾಗಿ ವ್ಯಕ್ತವಾಗಿರುವುದನ್ನು ನಾವು ಕಾಣಬಹುದು.

### ೧. ಎಲ್ಲರೊಡನೆ ಸಮನಾಗಿ ಬಾಳುವುದು

ಶ್ರೀಮಾತೆ ತಮ್ಮ ಜೀವನದಲ್ಲಿ ಎಂದೂ ಯಾವ ಅಧಿಕಾರವನ್ನೂ ಬಯಸಲಿಲ್ಲ. ಅವತಾರ ಪುರುಷನ ಪತ್ನಿ ಎಂದು ಪೂಜಿಸಿಕೊಳ್ಳಲೂ ಇಷ್ಟಪಡಲಿಲ್ಲ. ಶ್ರೀರಾಮಕೃಷ್ಣ ಮಹಾಸಂಘದ ಜನನಿಯಾಗಿದ್ದರೂ ಅದನ್ನು ಎಂದಿಗೂ ವ್ಯಕ್ತಪಡಿಸಲಿಲ್ಲ. ಅವರು ತಮ್ಮ ಭಕ್ತ ಮಕ್ಕಳಿಗಾಗಿ ಏನು ಬೇಕಾದರೂ, ಎಷ್ಟೇ ಕೆಳಮಟ್ಟದ ಕೆಲಸವನ್ನಾದರೂ ಮಾಡಲು ಸಿದ್ಧರಿದ್ದರು. ಅವರಿಗೆ ಅಡುಗೆ ಮಾಡಿ ಬಡಿಸುವುದು, ಅವರ ಊಟವಾದ ಮೇಲೆ ಅವರ ಎಂಜಲೆಲೆಯನ್ನು ತೆಗೆಯುವುದು, ನೆಲ ಸಾರಿಸುವುದು ಎಲ್ಲವನ್ನೂ ಸ್ವಲ್ಪ ಕೂಡ ಹಿಂಜರಿಯದೆ, ಸಹಜವಾಗಿ ಮಾಡುತ್ತಿದ್ದರು.

## ೨. ಸಾಮಾಜಿಕ ಪ್ರಜ್ಞೆ ಹಾಗೂ ಕಳಕಳಿ

ಅವರು ಜಯರಾಂಬಾಟಿಯಲ್ಲಿರುವಾಗ ತಾವೇ ಬಡತನ ದಿಂದ ನರಳುತ್ತಿದ್ದರೂ, ಪಡಬಾರದ ಕಷ್ಟಗಳನ್ನು ಅನುಭವಿಸು ತ್ತಿದ್ದರೂ ಅವರ ಪರೋಪಕಾರ ಬುದ್ಧಿ ಎಷ್ಟು ಉತ್ಕಟವಾಗಿತ್ತು ಎಂಬುದಕ್ಕೆ ಈ ಘಟನೆ ಒಂದು ನಿದರ್ಶನವಾಗಿದೆ. ಆಗ ಅವರು ವಾತರೋಗದ ನೋವಿನಿಂದ ನರಳುತ್ತಿದ್ದರು. ಮೊದಲನೆಯ ಮಹಾಯುದ್ಧದ ಸಮಯದಲ್ಲಿ ಸಾಮಾನ್ಯ ಸ್ಪಿರಿಟ್ ದುರ್ಲಭ ವಾಗಿತ್ತು. ಯುದ್ಧಕ್ಕೆ ಅದನ್ನು ಬಳಸುತ್ತಿದ್ದುದರಿಂದ ಅದು ಮಾರುಕಟ್ಟೆಗೆ ಬರುತ್ತಲೇ ಇರಲಿಲ್ಲ. ಆದರೆ ಒಬ್ಬ ಭಕ್ತನು ಜಯ ರಾಂಬಾಟಿ ಡಿಸ್ಪೆನ್ಸರಿಗಾಗಿ ಕೆಲವು ಸೀಸೆ ಸ್ಪಿರಿಟನ್ನು ಹೇಗೋ ದಕ್ಕಿಸಿ ಕೊಂಡು ಬಂದಿದ್ದನು. ಶ್ರೀಮಾತೆಯವರ ವಾತರೋಗದ ನೋವಿಗೆ ಸ್ಪಿರಿಟ್ ಹಾಕಿ ಉಜ್ಜಿದರೆ ನೋವು ಎಷ್ಟೋ ಕಡಿಮೆ ಯಾಗುತ್ತಿತ್ತು. ಆದರೆ ಅವರು ಅದಕ್ಕೆ ಒಪ್ಪಲಿಲ್ಲ. 'ಆ ಸ್ಪಿರಿಟ್ ಬಡವರಿಗಾಗಿ ತಂದದ್ದು. ನಾನದನ್ನು ಉಪಯೋಗಿಸಿ ಅವರಿಗೆ ಇಲ್ಲದಂತೆ ಮಾಡಲಾರೆ' ಎಂದು ನುಡಿದರು.

## ೩. ಪತ್ನೀಧರ್ಮ

ಸ್ತ್ರೀ ಪತ್ನಿಯಾಗಿ ಒಂದು ಆದರ್ಶ ಜೀವನವನ್ನು ನಡೆಸಬೇಕು. ಶ್ರೀಮಾತೆಯವರು ಶ್ರೀರಾಮಕೃಷ್ಣರೊಡನೆ ದಕ್ಷಿಣೇಶ್ವರದಲ್ಲಿ ಪತ್ನಿಯಾಗಿ ನಡೆಸಿದ ಜೀವನ ಅತ್ಯಂತ ಮಹತ್ವಪೂರ್ಣವಾದದ್ದು. ಇವರ ದಾಂಪತ್ಯ ಜೀವನ ಪತಿಪತ್ನಿಯರ ಕಾಮದ ವಾಸನೆ ಯಿಲ್ಲದ ದಿವ್ಯ ಸಂಬಂಧವಾಗಿತ್ತು. ಶ್ರೀಮಾತೆಯವರು ತಮ್ಮ ಪತಿಯನ್ನು ಯಾವ ದೃಷ್ಟಿಯಿಂದ ಕಾಣುತ್ತಿದ್ದರು? ಒಂದು ದಿನ ಶ್ರೀರಾಮಕೃಷ್ಣರ ಊಟದ ಸಮಯದಲ್ಲಿ ಗಾಳಿ ಬೀಸುತ್ತಾ ಪಕ್ಕದಲ್ಲಿ ಕುಳಿತಿದ್ದರು. ಅಕಸ್ಮಾತ್ ಅವರ ಕೈ ನಿಶ್ಚಲವಾಯಿತು. ವಿಸ್ಮಯದಿಂದ ತಮ್ಮ ಪತಿಯ ಮುಖವನ್ನೇ ನೋಡತೊಡಗಿದರು. ಅನಂತರ ಕೈ ಮುಗಿದು ಶ್ರೀರಾಮಕೃಷ್ಣರಿಗೆ ನಮಸ್ಕರಿಸಿದರು. ಶ್ರೀರಾಮಕೃಷ್ಣರು ಆಶ್ಚರ್ಯದಿಂದ ಕೇಳಿದರು, ''ಈಗೇಕೆ ನಮ ಸ್ಕಾರ?'' ಎಂದು. ಆದರೆ ಶ್ರೀಮಾತೆ ಬಹಳ ಹೊತ್ತು ಹೇಳಲೇ ಇಲ್ಲ. ಆದರೆ ಬಹಳ ಬಲವಂತ ಮಾಡಿದಾಗ ಹೇಳಿದರು, ''ನೀವು ಊಟ ಮಾಡುತ್ತಿದ್ದಿರಿ. ಹೆಗಲಿನವರೆಗೂ ನಿಮ್ಮ ದೇಹ ಹೀಗೆಯೇ ಇತ್ತು. ಆದರೆ ಅದರ ಮೇಲೆ ತಾಯಿ ಕಾಳಿಯ ತಲೆ. ತಲೆಯ ಮೇಲೆ ಚಿನ್ನದ ಕಿರೀಟ ಜಗಜಗಿಸುತ್ತಿತ್ತು. ನಿಮ್ಮ ಕೈ ಮೂಲಕ ಕಾಳಿಯೇ ಉಣ್ಣುತ್ತಿದ್ದಳು.'' ಶ್ರೀರಾಮಕೃಷ್ಣರು ನಸು ನಕ್ಕು 'ನೀನು ಸರಿಯಾಗಿಯೇ ನೋಡಿದೆ', ಎಂದರು. ಶ್ರೀರಾಮ ಕೃಷ್ಣರೋ ಶ್ರೀಮಾತೆಯನ್ನು ಕಾಳಿಯ ಸ್ಥಾನದಲ್ಲಿ ಕುಳ್ಳಿರಿಸಿ ಪೂಜಿಸಿದರು. ಪತಿಪತ್ನಿಯರ ದಾಂಪತ್ಯ ಎಲ್ಲ ಆದರ್ಶಗಳನ್ನೂ ಮೀರಿದ ಆದರ್ಶ ದಾಂಪತ್ಯವಾಗಿತ್ತು.

## ೪. ಮಾತೆಯ ಧರ್ಮ

ಶ್ರೀಮಾತೆ, ತಾಯಿಯ ಆದರ್ಶವನ್ನು ತಮ್ಮ ಜೀವನದ ಮೊದಲ ದಿನದಿಂದ ಕೊನೆಯ ದಿನದವರೆಗೂ ಎತ್ತಿ ತೋರಿಸಿ ಹೋಗಿದ್ದಾರೆ. ಒಂದು ದಿನ ಸ್ವಾಮಿ ವಿಶ್ವೇಶ್ವರಾನಂದರು ತಾವು ಊಟ ಮಾಡಿದ ತಟ್ಟೆಯನ್ನು ತೆಗೆಯುತ್ತಿದ್ದಾಗ, ಅವರ ಕೈ ಹಿಡಿದು ನಿಲ್ಲಿಸಿ ತಾವೇ ತಟ್ಟೆಯನ್ನು ತೆಗೆದರು. ''ನೀವೇನು ಮಾಡುತ್ತಿದ್ದೀರಿ? ನಾನೆ ತೆಗೆಯುತ್ತೇನೆ'' ಎಂದು ಸ್ವಾಮಿಗಳು ಹೇಳಿದಾಗ ಶ್ರೀಮಾತೆಯವರೆಂದರು, ''ನಿನಗಾಗಿ ನಾನು ಏನು ಮಹಾ ಮಾಡಿದ್ದೇನೆ? ಮಗು ತಾಯಿಯ ತೊಡೆಯ ಮೇಲೆ ಮಲ ಮೂತ್ರ ವಿಸರ್ಜನೆ ಮಾಡಿದಾಗ ತಾಯಿ ಶುದ್ಧಗೊಳಿಸುವು ದಿಲ್ಲವೆ? ನೀವೆಲ್ಲಾ ಸಂನ್ಯಾಸಿಗಳು ದೇವತೆಗಳಿಗೆ ಸಮಾನ'' ಎಂದರು.

ಒಂದು ಕಡೆ ಭಕ್ತರಿಂದ ಸೇವೆಯನ್ನು ಸ್ವೀಕರಿಸುತ್ತಿದ್ದಾರೆ, ಮತ್ತೊಂದು ಕಡೆ ತಾವೇ ಸೇವಕರಾಗಿ, ತಾಯಿಯಾಗಿ ಭಕ್ತರ ಸೇವೆ ಮಾಡುತ್ತಿದ್ದರು. 'ಹೂವ ತರುವರ ಮನೆಗೆ ಹುಲ್ಲ ತರುವ' ಎಂಬ ಮಾತು ಎಷ್ಟು ಸೊಗಸಾಗಿ ಶ್ರೀಮಾತೆಯವರಿಗೆ ಅನ್ವಯ ವಾಗುತ್ತದೆ!

## ೫. ಸ್ತ್ರೀಧರ್ಮ

ಸೋದರಿ ನಿವೇದಿತಾ ಶ್ರೀಮಾತೆಯವರ ಬಗ್ಗೆ ಹೀಗೆ ಬರೆಯುತ್ತಾರೆ: ''ಭಾರತೀಯ ಸ್ತ್ರೀತ್ವದ ಆದರ್ಶದ ಕುರಿತಾಗಿ ಶ್ರೀಮಾತೆಯವರು ಶ್ರೀರಾಮಕೃಷ್ಣರ ಕೊನೆಯ ಮಾತು ಎಂದು ನನಗೆ ಯಾವಾಗಲೂ ಅನ್ನಿಸಿದೆ. ಆದರೆ ಅವರು ಹಳೆಯ ಪರಂ ಪರೆಯ ಕೊನೆಯ ವ್ಯಕ್ತಿಯೋ ಅಥವಾ ಹೊಸ ಪರಂಪರೆಯ ಮೊದಲ ವ್ಯಕ್ತಿಯೊ?''

ಶ್ರೀಮಾತೆಯವರು ಸ್ತ್ರೀತ್ವದ ಪ್ರತಿರೂಪವಾಗಿದ್ದರು. ಕೀರ್ತಿ, ಶ್ರೀವಾಕ್ಕು, ಸ್ಮೃತಿ, ಮೇಧಸ್ಸು, ಧೃತಿ ಮತ್ತು ಕ್ಷಮೆ ಸ್ತ್ರೀಯರ ಲಕ್ಷಣಗಳೆಂದು ಭಗವದ್ಗೀತೆಯಲ್ಲಿ ಹೇಳಲ್ಪಟ್ಟಿದೆ. ಈ ಎಲ್ಲ ಸ್ತ್ರೀ ಸಹಜ ಗುಣಗಳೂ ಶ್ರೀಮಾತೆಯವರಲ್ಲಿ ಎದ್ದು ಕಾಣುತ್ತಿದ್ದವು. ಲಜ್ಜಾಪಟಾವೃತೆಯಾಗಿರುವುದು ಅವರ ಸಹಜಗುಣವಾಗಿತ್ತು. ಪವಿತ್ರತೆಯಂತೂ ಶ್ರೀರಾಮಕೃಷ್ಣರನ್ನೂ ಅಚ್ಚರಿಗೊಳಿಸಿತ್ತು. ಅವರೇ ಹೇಳುತ್ತಾರೆ, ''ಅವಳು ಅಷ್ಟೊಂದು ಪರಿಶುದ್ಧಳಿಲ್ಲದಿದ್ದರೆ, ನನ್ನನ್ನು ಮೋಹಗೊಳಿಸಲು ಪ್ರಯತ್ನಿಸಿದ್ದಿದ್ದರೆ ನಾನೂ ಸಂಯಮ ವನ್ನು ಕಳೆದುಕೊಂಡು ದೇಹಬುದ್ಧಿ ಬಂದುಬಿಡುತ್ತಿತ್ತೇನೋ, ಯಾರಿಗೆ ಗೊತ್ತು ?'' ಶ್ರೀಮಾತೆಯವರ ಮಾತು ತುಂಬ ಮೃದು. ಎಂದೂ ಅವರು ತಮ್ಮ ಮಾತಿನಿಂದ ಯಾರನ್ನೂ ನೋಯಿಸಿರ ಲಿಲ್ಲ. ಅವರ ಬುದ್ಧಿಶಕ್ತಿ, ವ್ಯಾವಹಾರಿಕ ಪ್ರಜ್ಞೆ, ಅದ್ಭುತ ಕ್ಷಮಾ ಗುಣ ಸ್ವಾಮಿ ವಿವೇಕಾನಂದರನ್ನೂ ಅಚ್ಚರಿಗೊಳಿಸಿತ್ತು.

ಹೀಗೆ ಶ್ರೀಮಾತೆ ಶಾರದಾದೇವಿಯವರು ಆದರ್ಶ ಗೃಹಿಣಿ ಯಾಗಿ, ಸಾಧಕಿ ಶ್ರೇಷ್ಠಳಾಗಿ ಒಂದು ಅಪೂರ್ವ ಜೀವನವನ್ನು ನಡೆಸಿ ಪ್ರಪಂಚದ ಎಲ್ಲ ವ್ಯಕ್ತಿಗಳಿಗೆ ಒಂದು ಆದರ್ಶ ಜೀವನವನ್ನು ತೋರಿಸಿಕೊಟ್ಟು ಹೋಗಿದ್ದಾರೆ.